೧	೨	೩	೪
೧೯೮೮-೮೯	೧) ಇರುಪು ರಾಮೇಶ್ವರ ದೇವಸ್ಥಾನ ವೀರಾಜಪೇಟೆ ತಾಲ್ಲೂಕ್	೨೦,೦೦೦-೦೦	ವೆಚ್ಚ ಮಾಡಿದ ಕುರಿತು ಸ್ಥಾನಿಕ ಅಧಿಕಾರಿಗಳಿಂದ ಉಪಯುಕ್ತತ ಪತ್ರ ನಿರೀಕ್ಷಿಸಿದೆ
	೨) ಶ್ರೀ ರಾಮಮಂದಿರ ಮಂಡಿಕೇರಿ ಟೌನ್	೨೦,೦೦೦-೦೦	,,
	೩) ಶ್ರೀ ಪಂಚಲಿಂಗೇಶ್ವರ ದೇವಸ್ಥಾನ ಶನಿವಾರಸಂತೆ	೨೦,೦೦೦-೦೦	,,
	೪) ಶ್ರೀ ಭಗವತಿ ದೇವಸ್ಥಾನ ಪಡಕಾಲು ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೫) ಶ್ರೀ ದಂಡಿನ ಮಾರಮ್ಮ ದೇವಸ್ಥಾನ	೨೦,೦೦೦-೦೦	,,
	೬) ಮಡಿಕೇರಿ ತಾಲ್ಲೂಕ್ ಪಾರಿಣ ಕೈಕಾಡುಗ್ರಾಮ ಮರಿ ಕೊಟ್ಟು ಮಹಾಲಕ್ಷ್ಮೀ ದೇವಸ್ಥಾನ	೨೦,೦೦೦-೦೦	,,
	೭) ಶ್ರೀ ಭಗವತಿ ದೇವಸ್ಥಾನ ಹರವನಾಡು ಗ್ರಾಮ ಮಡಿಕೇರಿ ತಾಲ್ಲೂಕ್	೧೫,೦೦೦-೦೦	,,
	೮) ಶ್ರೀ ಬಗಂಡೇಶ್ವರ ದೇವಸ್ಥಾನ ಭಾಗಮಂಡಲ, ಕೊಡಗು ತಾಲ್ಲೂಕ್	೨೦,೦೦೦-೦೦	,,
	೯) ಶ್ರೀ ಭಗವತಿ ದೇವಸ್ಥಾನ ಸಣ್ಣಿಮ್ಮ ಗ್ರಾಮ ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೧೦) ಶ್ರೀ ಭಗವತಿ ದೇವಸ್ಥಾನ ತಟ್ಟಿಗೇರಿ ವೀರಾಜಪೇಟೆ ತಾಲ್ಲೂಕ್	೨೦,೦೦೦-೦೦	,,
	೧೧) ಶ್ರೀ ಭಗವತಿ ದೇವಸ್ಥಾನ ಕಗ್ಗೋಡು ಗ್ರಾಮ ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೧೨) ಶ್ರೀ ಭಗವತಿ ದೇವಸ್ಥಾನ ಹರಪಟ್ಟಿ ಗ್ರಾಮ, ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೧೩) ಶ್ರೀ ಬಸವೇಶ್ವರ ದೇವಸ್ಥಾನ, ವಾಲ್ನೂರು ಸೋಮವಾರಪೇಟೆ ತಾಲ್ಲೂಕ್	೨೦,೦೦೦-೦೦	,,
	೧೪) ಶ್ರೀ ಕೃಷ್ಣ ದೇವಸ್ಥಾನ ಶ್ರೀ ಮಂಗಲ ಗ್ರಾಮ ವೀರಾಜಪೇಟೆ ತಾಲ್ಲೂಕ್	೨೦,೦೦೦-೦೦	,,
	೧೫) ಶ್ರೀ ಈಶ್ವರ ದೇವಸ್ಥಾನ ಕೊಟ್ನಹಳ್ಳಿ ವೀರಾಜಪೇಟೆ ತಾಲ್ಲೂಕ್	೨೦,೦೦೦-೦೦	,,
	೧೬) ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೧೭) ಶ್ರೀ ಭಗವತಿ ದೇವಸ್ಥಾನ ನೆಟ್ಟಮಾಡು ಯುವಕವಾಡಿ ಗ್ರಾಮ ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,
	೧೮) ಶ್ರೀ ಭಗವತಿ ದೇವಸ್ಥಾನ ಕರಿಯಮಂ ತ್ಯೂರು, ಮಡಿಕೇರಿ ತಾಲ್ಲೂಕ್	೨೦,೦೦೦-೦೦	,,

ಫ್ಲೂಯೀಂಡ್ ಹಾಗೂ ಡಿಸ್ಟಿಲ್ಡ್ ವಾಟರ್ ಪ್ಲಾಂಟುಗಳಿಗೆ ಮಂಜೂರಾತಿ ನೀಡಿರುವ ಬಗ್ಗೆ

೩೪೯. ಶ್ರೀಮತಿ ಸುಮಾಪಸಂತ (ವೀರಾಜಪೇಟೆ). — ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಫ್ಲೂಯಿಡ್ ಮತ್ತು ಡಿಸ್ಟಿಲ್ಡ್ ವಾಟರ್ ಪ್ಲಾಂಟುಗಳಿಗೆ ಮಂಜೂರಾತಿ ನೀಡಿರುವ ಸಂಖ್ಯೆ ಎಷ್ಟು, (ಜಿಲ್ಲಾವಾರು ಮಾಹಿತಿ ಹಾಗೂ ಪ್ಲಾಂಟುವಾರು ವಿವರ ನೀಡಬೇಕಾಗಿ ವಿನಂತಿ)

ಆ) ಇವರಲ್ಲಿ ಸರಿಯಾಗಿ ಕೆಲಸ ಮಾಡುತ್ತಿರುವ ಎಲ್ಲಾ ಪ್ಲಾಂಟುಗಳೆಷ್ಟು (ಜಿಲ್ಲಾವಾರು ಹಾಗೂ ಪ್ಲಾಂಟುವಾರು ವಿವರ ನೀಡಬೇಕಾಗಿ ವಿನಂತಿ)

ಇ) ಕೆಲಸ ಮಾಡದೇ ಹಾಗೂ ರಿಪೇರಿ ಮಾಡದೇ ಇರುವ ಪ್ಲಾಂಟುಗಳಾವುವು ಹಾಗೂ ಇವು ಎಂದಿನಿಂದ ಕೆಲಸ ಮಾಡದೆ ನಿಂತಿವೆ,

ಈ) ಈ ಪ್ಲಾಂಟುಗಳಿಗೆ ತಗಲಿರುವ ಒಟ್ಟು ವೆಚ್ಚವೆಷ್ಟು?

ಉ) ದುರಸ್ತಿ ಮಾಡಬೇಕಾಗಿರುವ ಪ್ಲಾಂಟುಗಳನ್ನು ಈವರೆಗೂ ದುರಸ್ತಿ ಮಾಡದಿರಲು ಕಾರಣವೇನು, ಹಾಗೂ ಎಷ್ಟು ಸಮಯದಲ್ಲಿ ಸರಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು). —

ಅ) ಕ್ರಮ ಸಂಖ್ಯೆ	ಜಿಲ್ಲೆ	ಘಟಕ	ಒಟ್ಟು
೧	ಬೆಂಗಳೂರು	ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ	೨
	ಬೆಂಗಳೂರು	ವಿಕ್ಟೋರಿಯಾ ಆಸ್ಪತ್ರೆ	
೨	ಮೈಸೂರು	ಕೆ. ಆರ್: ಆಸ್ಪತ್ರೆ	೧
೩	ಮಂಡ್ಯ	ಜಿಲ್ಲಾ ಆಸ್ಪತ್ರೆ (ಪ್ರಾರಂಭಿಸಲು ತಯಾರಾಗಿದೆ)	೧
೪	ದಕ್ಷಿಣ ಕನ್ನಡ	ಪೆನ್‌ಲಾಕ್ ಆಸ್ಪತ್ರೆ	೧
೫	ಶಿವಮೊಗ್ಗ	ಮೆಗ್ಗಾನ್ ಆಸ್ಪತ್ರೆ	೧
೬	ಚಿತ್ರದುರ್ಗ	ಸಿ.ಜಿ. ಆಸ್ಪತ್ರೆ, ದಾವಣಗೆರೆ, ಜಿಲ್ಲಾ ಆಸ್ಪತ್ರೆ	೨
೭	ಬಳ್ಳಾರಿ	ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ	೧
೮	ಧಾರವಾಡ	ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ	೧
೯	ಬೆಳಗಾಂ	ಜಿಲ್ಲಾ ಆಸ್ಪತ್ರೆ	೧
೧೦	ಗುಲ್ಬರ್ಗಾ	–ಅದೇ–	೧
೧೧	ಬಿಜಾಪುರ	–ಅದೇ–	೧
೧೨	ಬೀದರ್	–ಅದೇ	೧
೧೩	ಕೋಲಾರ	–ಅದೇ– (ಇನ್ನು ಪ್ರಾರಂಭವಾಗಿಲ್ಲ)	೧
೧೪	ರಾಯಚೂರು	–ಅದೇ–	೧
೧೫	ಕಾರವಾರ	–ಅದೇ–	೧
			೧೨

ರಾಜ್ಯದಲ್ಲಿ ಒಟ್ಟು ೧೨ ಆಸ್ಪತ್ರೆಗಳಿಗೆ ಔಷಧಾಲಯಗಳನ್ನು ಮಂಜೂರು ಮಾಡಲಾಗಿದೆ ಮಾಡಲಾಗಿರುವ ವಿವರಗಳು ಮೇಲಿನಂತಿವೆ.

ಆ) ೧೨. ಘಟಕಗಳು ಈಗಾಗಲೇ ಕೆಲಸ ಮಾಡುತ್ತಿವೆ. ಇನ್ನೆರಡು ಘಟಕಗಳು ಪ್ರಾರಂಭಿಸಲು ತಯಾರಾಗುತ್ತಿವೆ. ೩ ಕೇಂದ್ರಗಳಿಗೆ ಹೊಸ ಕಟ್ಟಡಗಳು ಬೇಕಾಗುತ್ತದೆ. ವಿವರಗಳು ಕೆಳಗಿನಂತಿವೆ

ಕ್ರಮ ಸಂಖ್ಯೆ	ಜಿಲ್ಲೆ	ಘಟಕ	ಸ್ಥಳ
೧	ಬೆಂಗಳೂರು	ವೌರಿಂಗ್ ಮತ್ತು ಲೇಡಿ ಕರ್ಜನ್	ಬೆಂಗಳೂರು
೨	ಬೆಂಗಳೂರು	ವಿಕ್ಟೋರಿಯಾ ಆಸ್ಪತ್ರೆ	ಬೆಂಗಳೂರು
೩	ಗುಲ್ಬರ್ಗಾ	ಜಿಲ್ಲಾ ಆಸ್ಪತ್ರೆ	ಗುಲ್ಬರ್ಗಾ
೪	ಮೈಸೂರು	ಕೆ ಆರ್. ಆಸ್ಪತ್ರೆ	ಮೈಸೂರು
೫	ದಕ್ಷಿಣ ಕನ್ನಡ	ವೆನ್‌ಲಾಕ್ ಆಸ್ಪತ್ರೆ	ಮಂಗಳೂರು
೬	ಶಿವಮೊಗ್ಗ	ಮೆಗ್ಗಾನ್ ಆಸ್ಪತ್ರೆ	ಶಿವಮೊಗ್ಗ
೭	ಚಿತ್ರದುರ್ಗ	ಸಿ.ಜಿ. ಆಸ್ಪತ್ರೆ	ದಾವಣಗೆರೆ
೮	ಧಾರವಾಡ	ಕೆ.ಎಂ.ಸಿ. ಹುಬ್ಬಳ್ಳಿ	ಹುಬ್ಬಳ್ಳಿ
೯	ಬಳ್ಳಾರಿ	ವೈದ್ಯಕೀಯ ಮಹಾವಿದ್ಯಾಲಯಂ, ಆಸ್ಪತ್ರೆ	ಬಳ್ಳಾರಿ
೧೦	ಬೆಳಗಾಂ	ಜಿಲ್ಲಾ ಆಸ್ಪತ್ರೆ	ಬೆಳಗಾಂ
೧೧	ಬಿಜಾಪುರ	–ಆದೇ–	ಬಿಜಾಪುರ
೧೨	ಬೀದರ್	–ಆದೇ–	ಬೀದರ್

ಇ) ಈಗಾಗಲೇ ೧೨ ಘಟಕಗಳು ಕೆಲಸ ಮಾಡುತ್ತಿವೆ.

ಈ) ತಗಲಿರುವ ಒಟ್ಟು ವೆಚ್ಚ ಒಂದು ಕೋಟಿ, ಈಗಿನ ಬೆಲೆಯ ಪ್ರಕಾರ

ಉ) ದಿನಾಂಕ:೧೧.೧೨.೮೭ರ ಸರ್ಕಾರಿ ಆದೇಶದ ಸಂಖ್ಯೆ ಆಕಾಕ/೨೧೭:ಹೆಚ್‌ಡಿಇ:೮೩ರ ಮೇರೆಗೆ ಸಂಬಂಧಪಟ್ಟ ಜಿಲ್ಲಾ ಸರ್ಜನ್: ಅಧೀಕ್ಷಕರು ಪ್ಲಾಂಟುಗಳ ದುರಸ್ತಿಗಾಗಿ ಮೆಸರ್ಸ್ ಕಿಯೋನಿಕ್ಸ್ ಜೊತೆ ಪತ್ರ ವ್ಯವಹಾರ ಮಾಡಿದ್ದರು. ಮೆಸರ್ಸ್ ಕಿಯೋನಿಕ್ಸ್‌ರವರಂ ಪ್ಲಾಂಟುಗಳ ದುರಸ್ತಿ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಈ ವಿಷಯವನ್ನು ಎಲ್ಲಾ ಜಿಲ್ಲಾ ಸರ್ಜನ್ಸ್: ಅಧೀಕ್ಷಕರಿಗೆ ತಿಳಿಸಲಾಯಿತು. ಮತ್ತು ಅವರು ಈ ದುರಸ್ತಿ ಕೆಲಸವನ್ನು ಬೇರೆ ಕಡೆಯಿಂದ ಮಾಡಿಸಿಕೊಳ್ಳಬಹುದೆಂದು ತಿಳಿಸಲಾಯಿತು.

ಆದರೆ, ಈ ದುರಸ್ತಿ ಕೆಲಸವು ೨–೩ ತಿಂಗಳೊಳಗೆ ಮುಗಿಯಬಹುದು.

ಆದರೆ, ದುರಸ್ತಿಯಾಗದೆ ಇರುವ ಪ್ಲಾಂಟುಗಳನ್ನು ತೆಗೆದುಹಾಕಲು, ಈಗಾಗಲೇ ಹೊಸ ಪ್ಲಾಂಟುಗಳನ್ನು ಖರೀದಿಸಲು ಆರ್.ಸಿ.ಗೊತ್ತು ಪಡಿಸಲು ಕ್ರಮಕ್ಕೆಗೊಂಡಿದೆ.

ಕೊಡಗು ಜಿಲೆ ಯ ನೀರಾವರಿ ಯೋಜನೆಗಳು.

೪೨೬. ಶ್ರೀಮತಿ ಸುಮಾವಸಂತ(ವಿರಾಜಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ನೀರಾವರಿ ಅಣೆಕಟ್ಟುಗಳಿವೆ ?

ಆ) ಸರ್ಕಾರವು ೧೯೮೬–೮೭ ಹಾಗೂ ೧೯೮೭–೮೮ನೇ ಸಾಲಿನಲ್ಲಿ ಕೊಡಗು ಜಿಲ್ಲೆ ಸಣ್ಣ ನೀರಾವರಿ ಇಲಾಖೆಗೆ ಎಷ್ಟು ಹಣ ಬಿಡುಗಡೆ ಮಾಡಿದೆ ?

ಇ) ಸರ್ಕಾರವು ೧೯೮೬-೮೭ ಹಾಗೂ ೧೯೮೭–೮೮ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ದುರಸ್ತಿ ಕಾಮಗಾರಿಗಳಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?